<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**</u>

<u>**ಕೆ.ಆರ್.ನಗರ**</u>

<u>**ಸಿ.ಸಿ. 1241/2019**</u>

<u>**ಪಿಡಬ್ಲೂ-12**</u>

<u>**ಸಿಡಬ್ಲೂ-17**</u>

ಸಾಕ್ಷಿದಾರರ ಹೆಸರು – ಜಿ ಜೆ ಸತೀಶ್
ತಂದೆಯ ಹೆಸರು – ಜವರೇಗೌಡ
ವಯಸ್ಸು – 49 ವರ್ಷ
ಕೆಲಸ – ಪಿ.ಐ, ಎ.ಸಿ.ಪಿ
ವಾಸ – ಉಡುಪಿ

<u>**ದಿನಾಂಕ 30.05.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ**</u>

21.08.2009 ರಿಂದ 07.09.2012 ರವರೆಗೆ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 24.09.2010 ರಂದು ಚಾಸಾ 9 ರವರ ಬೆಳಗಿನ ಜಾವ 1.30 ಗಂಟೆಗೆ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಮೇರೆಗೆ ಠಾಣಾ ಮೊಕದ್ದಮೆ ಸಂಖ್ಯೆ 254/10 ಕಲಂ 396 ಮತ್ತು ಇತರ ಐಪಿಸಿ ಸೆಕಷನ್ ಅಡಿ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕೂ ಹಾಗೂ ಮೇಲಾಧಿಕಾರಿಗಳು ಸಲ್ಲಿಸಿರುತ್ತೇನೆ. ಘೋರ ಪ್ರಕರಣವಾದ ಕಾರಣ, ಚಾಸಾ 19 ರವರಿಗೆ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ. ನಿಪಿ 7 ರಲ್ಲಿನ ಸಾಕ್ಷಿಯ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ 7(ಬಿ) ಎಂದು ಗುರುತಿಸಲಾಯಿತು. ನಿಪಿ 8 ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಕೆ ಪಿ ಎಮ್ ಆರೋಪಿ ಪರ ವಕೀಲರಿಂದಃ**

ನಿಪಿ 7 ನ್ನು ಚಾಸಾ 9 ರವರು ಠಾಣೆಗೆ ಅವರೇ ಬರೆದುಕೊಂಡು ಬಂದಿದ್ದರು. ನಿಪಿ 7 ರಲ್ಲಿ ಹಣದ ಮುಖಬೆಲೆಯ ಸಂಖ್ಯೆಗಳನ್ನು ಬರೆದಿಲ್ಲ. ಚಾಸಾ 9 ರವರು ಠಾಣೆಗೆ ಬಂದ ನಂತರ ಆಸ್ಪತ್ರೆಗೆ ಹೋಗಿರುತ್ತಾರೆ. ಮೌಖಿಕವಾಗಿ ನಾನು ಚಾಸಾ 9 ರವರಿಗೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಿರಿ ಎಂದು ತಿಳಿಸಿದ್ದೇನೆ. ನಿಪಿ 7 ನ್ನು ಚಾಸಾ 9 ರವರು ಬರೆದಿಲ್ಲ ಅದನ್ನು ನಾವೇ ನಮ್ಮ ಠಾಣೆಯಲ್ಲಿ ನಮ್ಮ ಅನುಕೂಲಕ್ಕೆ ಬರೆಸಿ ಅವರಿಂದ ಸಹಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಚಾಸಾ 9 ರವರು ಕ್ಯಾಂಟರವನ್ನು ಠಾಣೆಯಲ್ಲಿ ಬಿಟ್ಟು ಹೋಗಲಿಲ್ಲ. ನಾವು ನಮ್ಮ ಅನುಕೂಲಕ್ಕಾಗಿ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇರುವುದಿಲ್ಲ

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ